**ದಿನಾಂಕಃ 08-01-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಲಾಯಿತು**

**ಮುಂದುವರೆದ ಪಾಟೀ ಸವಾಲು ಪ್ರತಿವಾದಿಗಳ ಪರ ಶ್ರೀ ವಿ.ಬಿ.ಎಂ. ವಕೀಲರಿಂದಃ**

**5**. ದಾವಾ ಆಸ್ತಿಯ ಉತಾರೆಯನ್ನು ನಾನು ನೋಡಿರುವುದಿಲ್ಲ. ದಾವೆಯನ್ನು ಯಾವ ಆಧಾರದ ಮೇರೆಗೆ ದಾವೆ ಸಲ್ಲಿಸಿರುತ್ತೀರಿ ಎಂಬ ಪ್ರಶ್ನೆಗೆ ಸಾಕ್ಷಿಯು ಪ್ರತಿವಾದಿಯು ತೊಂದರೆ ನೀಡುತ್ತಿದ್ದು ಪೊಲೀಸ್ ಠಾಣೆಗೆ ಹೋಗಿ ದೂರನ್ನು ಸಲ್ಲಿಸಲು ಹೋದಾಗ ಪೊಲೀಸ್ ಸಿವ್ಹಿಲ್ ವ್ಯಾಜ್ಯ ಇರುತ್ತದೆ ಎಂದು ಹೇಳಿದ ಮೇರೆಗೆ ದಾವೆ ಸಲ್ಲಿಸಿರುತ್ತೇನೆ ಎಂದು ನುಡಿಯುತ್ತಾರೆ. ದಾವಾ ಆಸ್ತಿ ಮೂಲತಃ ಭಿನ್ ಶೇತ್ಕಿ ಯಾವಾಗ ಆಗಿರುತ್ತದೆ ಎಂದು ದಾಖಲಾತಿಯನ್ನು ನಾನು ನೋಡಿರುವುದಿಲ್ಲ. ಭಿನ್ ಶೇತ್ಕಿ ಯಾವಾಗ ಆಗಿರುತ್ತದೆ ಎಂದು ನಾನು ಇಲ್ಲಿಯವರೆಗೂ ನೋಡಿರುವುದಿಲ್ಲ ಎಂದರೆ ಸರಿ.

6. ದಾವಾ ಆಸ್ತಿ ನಂ.2031/1, 2 ಮತ್ತು 3 ಯಾವಾಗ ಪಂಚಾಯಿತಿಯಲ್ಲಿ ನೋಂದ ಆಗಿರುತ್ತವೆ ಎಂದರೆ ಸಾಕ್ಷಿಯು ನಾನು ಖರೀದಿಸುವ ಮುಂಚೆಯೇ ನೋಂದ ಆಗಿರುತ್ತದೆ ಎಂದು ನುಡಿಯುತ್ತಾರೆ. ಆಸ್ತಿಯನ್ನು ಖರೀದಿಸುವ ಮುಂಚೆಯೇ ದಾಖಲಾತಿಯನ್ನು ಪರಶೀಲಿಸುತ್ತಾರೆ ಎಂದರೆ ಸರಿ. ನಾನು ದಾವಾ ಆಸ್ತಿಯನ್ನು ಅಕ್ಟೋಬರ-2003 ರಲ್ಲಿ ಖರೀದಿ ಮಾಡಿರುತ್ತೇನೆ. ಆಸ್ತಿ ಭಿನ್ ಶೇತ್ಕಿಯಾಗಿ ಬದಲಾವಣೆಯಾಗಿರುತ್ತದೆಯೋ ಅಥವಾ ಗುಂಟಾ ಪ್ಲಾಟಾಗಿ ಬದಲಾವಣೆಯಾಗಿರುತ್ತದೆ ಎಂದು ದಾಖಲಾತಿಯನ್ನು ಪರಿಶೀಲಿಸಿರುವುದಿಲ್ಲ, ಉತಾರೆಯನ್ನು ನೋಡಿರುತ್ತೇನೆ ಎಂದು ನುಡಿಯುತ್ತಾರೆ.

7. ಉತಾರೆಯಲ್ಲಿ ಉದ್ದ-ಅಗಲ ಎಷ್ಟು ಎಂದು ದಾಖಲಾಗಿರುತ್ತದೆ. ಸದರಿ ಉತಾರೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಉತಾರೆಗಳನ್ನು ಯಾವ ಕಾರಣಕ್ಕಾಗಿ ಹಾಜರುಪಡಿಸಿಲ್ಲ ಎಂದರೆ ಸಾಕ್ಷಿಯು ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ನನಗೆ ವ್ಯವಹಾರದ ಜ್ಞಾನ ಇರುತ್ತದೆ. ಉತಾರೆಯಲ್ಲಿ ಯಾವುದೇ ಅಳತೆ ಇಲ್ಲದಿದ್ದರು ಸಹ ನನಗೆ

ಬೇಕಾದ ಹಾಗೆ ಖರೀದಿ ಪತ್ರದಲ್ಲಿ ನಮೂದು ಮಾಡಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಖರೀದಿಸುವ ಮುಂಚೆ ದಾವಾ ಆಸ್ತಿ ಮಡಿವಾಳಪ್ಪ ಹೆಸರಿನಲ್ಲಿ ಏಕತ್ರ ಕುಟುಂಬದಲ್ಲಿ ಇತ್ತು ಎಂದರೆ ಸಾಕ್ಷಿಯು ಮಡಿವಾಳಪ್ಪ ಹೆಸರಿನಲ್ಲಿ ಇರುತ್ತವೆ ಎಂದು ನುಡಿಯುತ್ತಾರೆ. ಮಡಿವಾಳಪ್ಪನ ಏಕತ್ರ ಕುಟುಂಬದ ಆಸ್ತಿ ಎಂದರೆ ಸರಿ.

8. ನಾನು ಪ್ರತಿವಾದಿಗೆ ದಿಃ24.06.2019 ರಲ್ಲಿ ನೋಟಿಸ ನೀಡಿರಬಹುದು. ಪ್ರತಿವಾದಿಯು ನೀಡಿದ ಪ್ರತ್ಯುತ್ತರವನ್ನು ನನಗೆ ವಕೀಲರು ತೋರಿಸಿರುತ್ತಾರೆ. ಸರ್ವೆ ನಂ.319/3 ರಲ್ಲಿ 27 ಪ್ಲಾಟ ಆಗಿದ್ದವು ಎಂದು ಬರೆಸಿರುತ್ತೇನೆ ಎಂದರೆ ಸರಿ. ನಾನು ವಿದ್ಯಾಭ್ಯಾಸ ಮಾಡಿರುವುದಿಲ್ಲ. 1 ಎಕರೆದಲ್ಲಿ ಅಂದಾಜು 20 ಪ್ಲಾಟಗಳು ಆಗುತ್ತವೆ ಎಂದು ನಾನು ಜನರಿಂದ ತಿಳಿದುಕೊಂಡಿರುತ್ತೇನೆ. 1 ಎಕರೆದಲ್ಲಿ 11 ಪ್ಲಾಟಗಳು ಆಗುತ್ತವೆ ಎಂದರೆ ಸರಿಯಲ್ಲ. ಸರ್ವೆ ನಂ.319/3 ರಲ್ಲಿ 27 ಪ್ಲಾಟ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂ.319/3 ಮಡಿವಾಳಪ್ಪ ಹೆಸರಿನಲ್ಲಿ ಇದ್ದು, ಆತನು ಮೃತನಾದ ನಂತರ ಆತನ ಮಕ್ಕಳ ಹೆಸರಿನಲ್ಲಿ ವಾರಸಾ ಆಗಿರುತ್ತದೆ ಎಂದರೆ ಸರಿ. ವಾರಸಾ ನಾತೆಯಿಂದ ಅವರ ಹೆಸರು ದಾಖಲಾದ ನಂತರ ಉಳುಮೆ ಮಾಡಿಕೊಂಡು ಬಂದಿರುತ್ತಾರೆ ಎಂದರೆ ಸರಿಯಲ್ಲ.

9. ಭಿನ್ ಶೇತ್ಕಿ ಆಗದೆ ಇರುವ ಕಾರಣ ಪ್ಲಾಟುಗಳು ಆಗಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯು ಭಿನ್ ಶೇತ್ಕಿ ಆಗದ ಜಮೀನಿನಲ್ಲಿ 40X100 ಕ್ಷೇತ್ರದಲ್ಲಿ ಅಂಗಡಿಯನ್ನು ಇಟ್ಟುಕೊಂಡು ನಡೆಸುತ್ತಿರುತ್ತಾನೆ ಎಂದರೆ ಸರಿಯಲ್ಲ. ಪ್ರತಿ ತಿಂಗಳು 3,000/- ರಂತೆ ಬಾಡಿಗೆಯಂತೆ ಮಡಿವಾಳಪ್ಪನ ವಾರಸಾದಾರರಿಗೆ ನೀಡುತ್ತಾ ಬಂದಿರುತ್ತಾರೆ ಎಂದರೆ ಸರಿ. ಪ್ರತಿವಾದಿಯು ಗುಜುರಿ ಅಂಗಡಿಯನ್ನು ಇಟ್ಟುಕೊಂಡು ವ್ಯಪಾರ ಮಾಡಿಕೊಂಡು ಹೋಗುತ್ತಿದ್ದಾನೆ ಎಂದರೆ ಸರಿ. ದಾವಾ ಆಸ್ತಿಯಲ್ಲಿ 20 ವರ್ಷಗಳಿಂದ ಪ್ರತಿವಾದಿಯು ಕಬ್ಜಾ ವಹಿವಾಟಿನಲ್ಲಿ ಇರುತ್ತಾನೆ ಎಂದರೆ ಸಾಕ್ಷಿಯು ದಾವಾ ಸಲ್ಲಿಸುವ 1 ವರ್ಷ ಮುಂಚೆಯಿಂದ ಸ್ವಾಧಿನದಲ್ಲಿ

ಇರುತ್ತಾನೆ ಎಂದು ನುಡಿಯುತ್ತಾರೆ. ಪ್ರತಿವಾದಿಗೆ ಯಾವುದೇ ಅಡ್ಡಿ-ಆತಂಕ ಮಾಡಿಲ್ಲ ಎಂದರೆ ಸಾಕ್ಷಿಯು ನಾವೆ ದಾವೆ ಸಲ್ಲಿಸಿರುತ್ತೇವೆ ಎಂದು ನುಡಿಯುತ್ತಾರೆ. ಬೇರೆ ಯಾರು ಅಡ್ಡಿ-ಆತಂಕ ಮಾಡಿಲ್ಲ ಎಂದು ನುಡಿಯುತ್ತಾರೆ. ದಾವಾ ಸಲ್ಲಿಸುವ ಮುಂಚೆ ಅಡ್ಡಿ-ಆತಂಕ ಮಾಡಿಲ್ಲ ಎಂದರೆ ಸರಿ. ಪ್ರತಿವಾದಿಯು 3,000/- ಬಾಡಿಗೆ ನೀಡುತ್ತಾ ಸ್ವಾಧಿನದಲ್ಲಿ ಇರುತ್ತಾನೆ ಎಂದರೆ ಸಾಕ್ಷಿಯು 3,000/- ಬಾಡಿಗೆ ನೀಡುತ್ತಿರುತ್ತಾರೆ ಎಂದು ಹೇಳಿರುತ್ತಾರೆ ಎಂದು ಗೊತ್ತಾಗಿರುತ್ತದೆ ಎಂದು ನುಡಿಯುತ್ತಾರೆ. ಪ್ರತಿವಾದಿಯು ವ್ಯಪಾರ ಮಾಡಿಕೊಂಡು ಹೋಗುತ್ತಿರುತ್ತಾನೆ ಎಂದು ನನಗೆ ಗೊತ್ತಾಗಿರುತ್ತದೆ ಎಂದರೆ ಸರಿ.

10. ಪ್ರತಿವಾದಿಯು ನನ್ನ ಜಾಗದಲ್ಲಾಗಲ್ಲಿ, ಸಗರನಾಳ ಕುಟುಂಬದವರ ಜಾಗದಲ್ಲಿ ಒತ್ತುವರಿ ಮಾಡಿಲ್ಲ ಎಂದರೆ ಸರಿಯಲ್ಲ. ದಾವಾ ಸಲ್ಲಿಸಿದ ನಂತರ ದಾವಾ ಆಸ್ತಿಯನ್ನು ನಾನು ಖರೀದಿ ಮಾಡಿದ ಬಗ್ಗೆ ಪ್ರತಿವಾದಿಗೆ ಗೊತ್ತಿರಲ್ಲಿಲ್ಲಾ ಎಂದರೆ ಸಾಕ್ಷಿಯು ಸಗರನಾಳ ಕುಟುಂಬಕ್ಕೆ ಗೊತ್ತಿರುತ್ತದೆ ಎಂದು ನುಡಿಯುತ್ತಾರೆ. ಮಡಿವಾಳಪ್ಪನ ಕುಟುಂಬದವರಿಗೆ ನಾನು ಆಸ್ತಿಯನ್ನು ಖರೀದಿ ಮಾಡಿದ ಬಗ್ಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಮಡಿವಾಳಪ್ಪನ ಕುಟುಂಬದವರು ಒಪ್ಪಿಗೆ ಪಡೆದುಕೊಂಡಿದ್ದಿರಾ ಎಂಬ ಪ್ರಶ್ನೆಗೆ ಸಾಕ್ಷಿಯು ಎಲ್ಲರು ಒಪ್ಪಿಗೆ ನೀಡಿರುತ್ತಾರೆ ಎಂದು ನುಡಿಯುತ್ತಾರೆ. ಮಡಿವಾಳಪ್ಪನ ಕುಟುಂಬದವರು ಪ್ರತಿವಾದಿಗೆ ಬಾಡಿಗೆ ನೀಡಿದ್ದು, ಯಾವುದೇ ಮಾರಾಟ ಮಾಡಿರುವುದಿಲ್ಲ ಎಂದು ನನಗೆ ತಿಳಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

11. ಪ್ರತಿವಾದಿಯು ಪರವಾಣಿಗೆ ಪಡೆದುಕೊಂಡು ಅಂಗಡಿ ನಡೆಸುತ್ತಿದ್ದು, ಯಾವುದೇ ಅತೀ ಕ್ರಮನ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಪ್ರತಿವಾದಿಯ ನಡೆಸುತ್ತಿರುವ ಕಿರಾಣಿ ಅಂಗಡಿಯ ಸ್ಥಳದ ಮಾಲೀಕನು ಅಲ್ಲ ಎಂದರೆ ಸರಿಯಲ್ಲ. ನಾನು ಮಾಲೀಕನಾಗಿರುತ್ತೇನೆ ಎಂದು ತೋರಿಸಲು ಯಾವುದೇ ದಾಖಲಾತಿಯನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನನ್ನ ಹೆಸರಿನಲ್ಲಿ ಉತಾರೆಯನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

12. ನನ್ನ ಹೆಸರಿನಲ್ಲಿ ಉತಾರೆ ಪಂಚಾಯಿತಿಯಲ್ಲಿ ದಾಖಲಾಗಿಲ್ಲ ಎಂದರೆ ಸರಿಯಲ್ಲ. ಖರೀದಿ ಆಧಾರದ ಮೇರೆಗೆ ದಾವಾ ಆಸ್ತಿಯ ಮಾಲೀಕನು ಅಲ್ಲ ಎಂದರೆ ಸರಿಯಲ್ಲ. ನಾನು ಖರೀದಿ ಪಡೆದುಕೊಂಡಾಗ ಮಡಿವಾಳಪ್ಪನಿಗೆ 65 ವರ್ಷ ಆಗಿರುತ್ತದೆ. ಖರೀದಿ ಪಡೆದುಕೊಂಡಾಗ ಮಡಿವಾಳಪ್ಪನಿಗೆ 75-80 ವರ್ಷ ಆಗಿರಬಹುದು ಎಂದರೆ ಸರಿಯಲ್ಲ. ದಾವಾ ಆಸ್ತಿ ರಾಷ್ಟ್ರೀಯ ಹೆದ್ದಾರಿಗೆ ಹೊಂದಿಕೊಂಡಿರುತ್ತದೆ ಎಂದರೆ ಸರಿ. ಪಂಚಾಯಿತಿಯಲ್ಲಿ ನಾನೆ ಖುದ್ದಾಗಿ ಉತಾರೆಯನ್ನು ತಯಾರಿಸಿರುತ್ತೇನೆ ಎಂದರೆ ಸರಿಯಲ್ಲ. ವಯಸ್ಸಾದ ಮಡಿವಾಳಪ್ಪನನ್ನು ಕರೆದುಕೊಂಡು ಬಂದ ಖೊಟ್ಟಿ ಖರೀದಿ ಪತ್ರ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

13. ಗ್ರಾಮ ಪಂಚಾಯಿತಿ ನಿಡಗುಂದಿ ಬದಲಾವಣೆಯಾಗಿ ಪಟ್ಟಣಪಂಚಾಯಿತಿ ಆಗಿ 3 ವರ್ಷಗಳು ಆಗಿರಬಹುದು. ಸನ್ 2015 ರಲ್ಲಿ ಪಟ್ಟಣಪಂಚಾಯಿತಿ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಪಟ್ಟಣಪಂಚಾಯಿತಿಯಲ್ಲಿ ನನ್ನ ಹೆಸರನ್ನು ದಾಖಲು ಮಾಡಿಕೊಂಡಿರುತ್ತೇನೆ. ಪಟ್ಟಣಪಂಚಾಯಿತಿಯಲ್ಲಿ ನನ್ನ ಹೆಸರಿನಲ್ಲಿ ದಾಖಲಾದ ಬಗ್ಗೆ ಉತಾರೆಯನ್ನು ನ್ಯಾಯಾಲಯಲಕ್ಕೆ ಹಾಜರುಪಡಿಸಿಲ್ಲ. ನಮ್ಮ ವಕೀಲರು ಕೇಳದ ಕಾರಣ ಉತಾರೆಯನ್ನು ಹಾಜರುಪಡಿಸಿಲ್ಲ ಎಂದು ನುಡಿಯುತ್ತಾರೆ. ನನ್ನ ಹೆಸರಿನಲ್ಲಿ ದಾಖಲಾದ ಬಗ್ಗೆ ಪಟ್ಟಣಪಂಚಾಯಿತಿಗೆ ತೆರಿಗೆಯನ್ನು ಪಾವತಿಸಿಲ್ಲ ಎಂದರೆ ಸರಿಯಲ್ಲ. ತೆರಿಗೆ ಪಾವತಿಸಿದ ರಶೀದಿಗಳನ್ನು ನ್ಯಾಯಾಲಯಲಕ್ಕೆ ಹಾಜರುಪಡಿಸಿರುವುದಿಲ್ಲ, ಸಾಕ್ಷಿ ಮುಂದುವರೆದು ಅವಶ್ಯಕತೆ ಬಿದ್ದರೆ ಹಾಜರುಪಡಿಸುತ್ತೇನೆ ಎಂದು ನುಡಿಯುತ್ತಾರೆ. ನಾನು ದಾವಾ ಆಸ್ತಿಯ ಮಾಲೀಕನಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯು ಇಲ್ಲಿಯವರೆಗೂ ಮಡಿವಾಳಪ್ಪ ಕುಟುಂಬದವರೆ ಸ್ವಾಧಿನದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. ನಿಡಗುಂದಿ ಗ್ರಾಮ ಪಂಚಾಯಿತಿಯಲ್ಲಿ ಹೆಸರು ನೋಂದಾಯಿಸಿಕೊಂಡು ಮಾಲೀಕನು ಆಗಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ದಾವಾ ಆಸ್ತಿಯಲ್ಲಿ ಯಾವುದೇ ವೈಹಿವಾಟು ಮಾಡಿಲ್ಲ ಎಂದರೆ ಸರಿ. ವೈಹಿವಾಟು ಮಾಡದ ಕಾರಣ ದಾವಾ ಆಸ್ತಿಗೂ ನನಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

14. ಪ್ರತಿವಾದಿಯು ಸಲ್ಲಿಸಿದ ತಕರಾರನ್ನು ನೋಡಿರುತ್ತೇನೆ. ಪ್ರತಿವಾದಿಯು ತಕರಾರಿನಲ್ಲಿ ದಾವಾ ಆಸ್ತಿ ಮಡಿವಾಳಪ್ಪನ ಕುಟುಂಬಕ್ಕೆ ಸೇರಿದ ಆಸ್ತಿ ಎಂದು ನಮೂದಿಸಿರುತ್ತಾರೆ ಎಂದರೆ ಸರಿಯಲ್ಲ. ಮಡಿವಾಳಪ್ಪ ತೀರಿಕೊಂಡು ಅಂದಾಜು 10 ವರ್ಷ ಆಗಿರಬಹುದು. ಮಡಿವಾಳಪ್ಪ ಸನ್ 2009 ರಲ್ಲಿ ನಿಡಗುಂದಿ ತೀರಿಕೊಂಡಿರುತ್ತಾನೆ ಎಂದರೆ ಸರಿ. ಸದರಿಯವರು ಮೃತನಾದ ನಂತರ ಅವರ ಮಕ್ಕಳೆ ವಾರಸದಾರರು ಇರುತ್ತಾರೆ ಎಂದರೆ ಸಾಕ್ಷಿಯು ನಾನು ದಾವೆಯನ್ನು ಸಲ್ಲಿಸಿದ್ದು, ಆ ಸಮಯದಲಿಲ ಅಪಸಾತ್ ಮಾಡಿಕೊಂಡು ದಾವಾ ಆಸ್ತಿಯನ್ನು ನನಗೆ ಬಿಟ್ಟುಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯು ಅವರ ಮಕ್ಕಳು ವಾರಸಾದಾರರು ಆಗಿದ್ದು, ಅವರ ಅವಶ್ಯಕ ಪಕ್ಷಗಾರರಾಗಿದ್ದು, ಅವರನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸಾಕ್ಷಿಯು ಕೇಲವು ಜನರನ್ನು ಮಾಡಿರುತ್ತೇನೆ, ಇನ್ನೂ ಕೇಲವರನ್ನು ಮಾಡಿರುವುದಿಲ್ಲ ಎಂದು ನುಡಿಯತ್ತಾರೆ.

15. ಪ್ರತಿವಾದಿಯನ್ನು ನಾನು ಇವತ್ತಿನ ತನ ನೋಡಿರುವುದಿಲ್ಲ. ಆತನ ವಯಸ್ಸು ಎಷ್ಟು ಇರುತ್ತದೆ ಎಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿಯ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗೆ ಹೋಗಿಲ್ಲ, ದಾವಾ ಆಸ್ತಿಯಲ್ಲಿ ಯಾರು ಇರುತ್ತಾರೆ ಎಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿಯಲ್ಲಿ ಯಾರು ಅಂಗಡಿಯನ್ನು ನಡೆಸುತ್ತಾರೆ ನಾನು ಸ್ಥಳಕ್ಕೆ ಹೋಗದೆ ಕಾಲ್ಪನಿಕವಾಗಿ ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ಕಬಳಿಸಬೇಕೆಂಬ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

16. 2019 ರಲ್ಲಿ ಮಡಿವಾಳಪ್ಪನ ಕುಟುಂಬದವರಿಗೆ ದಾವಾ ಆಸ್ತಿಯನ್ನು ಬಾಡಿಗೆ ಏಕೆ ನೀಡುತ್ತಿರಾ ಎಂದು ಕೇಳಿರುತ್ತೇನೆ. ಮಡಿವಾಳಪ್ಪನ ಕುಟುಂಬಸ್ಥರು ಒಬ್ಬರಿಂದ ಒಬ್ಬರು ನಾನು ನೀಡಿಲ್ಲ ಎಂದು ನುಡಿಯುತ್ತಾರೆ ಬಂದಿರುತ್ತಾರೆ. ಸದರಿ ವಿಷಯವನ್ನು ನನ್ನ ದಾವೆಯಲ್ಲಿ ನಮೂದಿಸಿರುವುದಿಲ್ಲ. ದಾವೆಯನ್ನು ನಾನು ಸ್ವಾಧಿನದಲ್ಲಿ ಇದ್ದವರ ವಿರುದ್ಧ ಮಾತ್ರ ದಾವೆ

ಸಲ್ಲಿಸಿರುತ್ತೇನೆ. ಪ್ರತಿವಾದಿಯು ದಾವಾ ಆಸ್ತಿಯ ಮಾಲೀಕನು ಅಲ್ಲ ಎಂದರೆ ಸರಿ. ಮಡಿವಾಳಪ್ಪನ ಕುಟುಂಬದ ಒಪ್ಪಿಗೆ ಮೇರೆಗೆ ವ್ಯಪಾರ ಮಾಡಿಕೊಂಡು ಬಂದಿರುತ್ತಾನೆ ಎಂದರೆ ಸರಿ. ಪ್ರತಿವಾದಿಯು ನಮ್ಮ ಜಾಗದಲ್ಲಿ ಅತೀಕ್ರಮಣ ಮಾಡಿ ವ್ಯಪಾರ ಮಾಡಿಕೊಂಡಿರುತ್ತಾನೆ ಎಂದು ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಮಡಿವಾಳಪ್ಪನ ಕುಟುಂಬದವರೆ ಮಾಲೀಕರು ಎಂದರೆ ಸರಿಯಲ್ಲ.

17. ಮೂಲ ಖರೀದಿ ಪತ್ರವನ್ನು ಹಾಜರುಪಡಿಸಿಲ್ಲ ಎಂದರೆ ಸಾಕ್ಷಿಯು ಇನ್ನೊಂದು ಪ್ರಕರಣದಲ್ಲಿ ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಗೆ ನಾನು ಮಾಲೀಕನು ಆಗದಿದ್ದರು ಸಹ ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಈಗಿನ ಮೌಲ್ಯ ಎಷ್ಟು ಇರುತ್ತದೆ ಎಂದು ನನಗೆ ಗೊತ್ತಿಲ್ಲ. ಪ್ರತಿವಾದಿಯು ಯಾವುದೇ ಅತೀಕ್ರಮಣ ಮಾಡಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಅದೆ.**

**(ಶ್ರೀ ಅಮಿತ್ ಘಟ್ಟಿ)**
**ದಿವಾಣಿ ನ್ಯಾಯಾಧೀಶರು ಮತ್ತು**
**ನ್ಯಾಯಿಕ ದಂಡಾಧಿಕಾರಿಗಳು**
**ಬಸವನ ಬಾಗೇವಾಡಿ.**